# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI





ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 10 Reg. No. : KARBIL / 2005 / 16123 ಜುಲೈ - 2021 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ - 7 ಪ್ರಕಟಣೆ : 26-07-2021


## ಶ್ರೀ ಸುಬ್ರಹ್ಮಣ್ಯ ಸಭಾದ ನೂತನ ಯೋಜನೆ ಪುತ್ತೂರಿನ 'ಶಿವ ಸದನ'ಕ್ಕೆ ದಾನಿಗಳ ಸಹಾಯಹಸ್ತ

ಪುತ್ತೂರಿನ 'ಶಿವಸದನ'ವು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದಲ್ಲಿ ಆರಂಭಿಸಿರುವ ಹಿರಿಯ ನಾಗರಿಕರ ವಸತಿಗೃಹ ನೂತನ ಯೋಜನೆಗೆ ಸಮಾಜ ಬಾಂಧವರು ಉತ್ತಮವಾಗಿ ಸ್ಪಂದಿಸುತ್ತಿದ್ದು ತಮ್ಮ ವೈಯಕ್ತಿಕ ಸಂತೋಷ ದಿನಗಳ ಸ್ಮರಣಾರ್ಥ ದೇಣಿಗೆಗಳನ್ನು ಶ್ರೀ ಸಭಾಕ್ಕೆ ನೀಡಿ ಅರ್ಥಪೂರ್ಣವಾಗಿ ಆಚರಿಸುತ್ತಿದ್ದಾರೆ. ಶ್ರೀ ಸಭಾದ ಸಮಾಜಮುಖೀ ಕಾರ್ಯಕ್ಕೆ ಧನಸಹಾಯವನ್ನು ನೀಡಿ ಉತ್ಸಾಹ ತುಂಬಿ ಸಮಾಜಕ್ಕೆ ಮಾದರಿಯಾಗುತ್ತಿದ್ದಾರೆ. ಇವರ ಈ ಕಾರ್ಯವು ಇತರರಿಗೂ ಪ್ರೇರಣದಾಯಕವಾಗಲಿ ಹಾಗೂ ಶ್ರೀ ಸಭಾದ ನೂತನ ಯೋಜನೆಗಳಿಗೆ ಇನ್ನಷ್ಟು ನೆರವು ಹರಿದು ಬರಲಿ ಎಂದು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತ ಮಂಡಳಿ ಹಾರೈಸುತ್ತಿದೆ.

'ಶಿವಸದನ' ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 20ಕ್ಕೂ ಹೆಚ್ಚು ನಿವಾಸಿಗಳಿದ್ದು, ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಈ ಮಾಹಿತಿಯನ್ನು ನೀಡಿ, ಸಹಕರಿಸಿ.

**ಸಂಪರ್ಕಿಸಿ : ಶ್ರೀ ಕರುಣ್ ರಾವ್ ಬೆಳ್ಳೆ ಮೊಬೈಲ್ : 7337634359 ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : 7795116598**



ಶ್ರೀಮತಿ ಶಾರದ ಉದಯ್ ಮತ್ತು ಶ್ರೀ ಉದಯಭಾಸ್ಕರ್ ವೈ. ವಿ. ಇವರು ತಮ್ಮ ತಂದೆ-ತಾಯಿಗಳಾದ ಶ್ರೀ ವೈ. ವಾಸುದೇವ ರಾವ್ ಮತ್ತು ಸರೋಜಿನಿ ವಿ. ರಾವ್ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾಕ್ಕೆ ರೂ. **2** ಲಕ್ಷ ದೇಣಿಗೆ ನೀಡಿ ವಿದ್ಯಾರ್ಥಿವೇತನ ನಿಧಿಯನ್ನು ಸ್ಥಾಪಿಸಿದ್ದಾರೆ. ಈ ಸತ್ಕಾರ್ಯವನ್ನು ಶ್ರೀ ಸಭಾದ ವತಿಯಿಂದ ಅವರ ನಿವಾಸಕ್ಕೆ ತೆರಳಿ ಅಭಿನಂದಿಸಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರು ಉಪಸ್ಥಿತರಿದ್ದರು. ಶ್ರೀ ಉದಯಭಾಸ್ಕರ್ ವೈ. ವಿ. ಇವರು ಸ್ಟೇಟ್ ಬ್ಯಾಂಕ್‌ನ ಉನ್ನತ ಹುದ್ದೆಯಲ್ಲಿ ನಿವೃತ್ತರಾಗಿದ್ದು ಇದೀಗ ಮಂಗಳೂರಿನ ಕಂಕನಾಡಿಯಲ್ಲಿ ವಾಸಿಸುತ್ತಿದ್ದಾರೆ.

ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರೂ, ಸಭಾದ ಎಲ್ಲಾ ಕಾರ್ಯಕ್ರಮಗಳ ಅತ್ಯುತ್ತಮ ಛಾಯಾಚಿತ್ರಗಳನ್ನು ತೆಗೆದು ಒದಗಿಸುತ್ತಿರುವ ಶ್ರೀ ರಘುವೀರ್ ಪೆರ್ಡೂರು ಮತ್ತು ಶ್ರೀಮತಿ ಲತಾ ಇವರ ವೈವಾಹಿಕ ಬೆಳ್ಳಿಹಬ್ಬದ **(3-5-2021)** ಪ್ರಯುಕ್ತ ಶ್ರೀ ಸಭಾದ ಪುತ್ತೂರಿನ 'ಶಿವಸದನ'ದ ವೃದ್ಧಾಶ್ರಮಕ್ಕೆ ರೂ. **1,00,000/-** (ಒಂದು ಲಕ್ಷ) ದೇಣಿಗೆಯನ್ನು ನೀಡಿ ಅರ್ಥಪೂರ್ಣವಾಗಿ ಆಚರಿಸಿದರು. ಇವರ ಆದರ್ಶ ಎಲ್ಲರಿಗೂ ಮಾದರಿಯಾಗಲಿ ಮತ್ತು ಇವರ ದಾಂಪತ್ಯ ಜೀವನ ಯಶಸ್ವಿಯಾಗಿ ಸುವರ್ಣ ವರ್ಷದತ್ತ ಸಾಗಲಿ ಎಂದು ನಮ್ಮೆಲ್ಲರ ಹಾರೈಕೆ. ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಅವರಿಗೆ ದೇಣಿಗೆ ರಶೀದಿಯನ್ನು ನೀಡಿ, ಅವರ ಮನೆದೇವರ ಮುಂದೆ ಹಾರ ಬದಲಾಯಿಸಿ, ಹಾಲ್ಬಾಯ್ ಕತ್ತರಿಸಿ, ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ಸಂತೋಷ್ ಯು., ಶ್ರೀ ಸೋಮಶೇಖರ್, ಶ್ರೀಮತಿ ಅರುಣಾ ಸೋಮಶೇಖರ್, ಶ್ರೀ ತೇಜಸ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





ಶ್ರೀ ಸುಬ್ರಹ್ಮಣ್ಯ ಸಭಾದ ಮಹಿಳಾ ವೇದಿಕೆಯ ಕಾರ್ಯದರ್ಶಿಯಾಗಿರುವ ಶ್ರೀಮತಿ ಪುಷ್ಪಾವತಿ ಮತ್ತು ಶ್ರೀ ಶ್ರೀನಿವಾಸ್‌ರವರು 42ನೇ ವರ್ಷದ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿರುವ ಪ್ರಯುಕ್ತ ತಮ್ಮ ಮದುವೆಯ ದಿನದ ಸವಿನೆನಪಿಗಾಗಿ ಶ್ರೀ ಸಭಾದ ಪುತ್ತೂರಿನ 'ಶಿವಸದನ' ವೃದ್ಧಾಶ್ರಮಕ್ಕೆ ರೂ. **1,00,000** (ಒಂದು ಲಕ್ಷ) ದೇಣಿಗೆಯನ್ನು ನೀಡಿ ಅರ್ಥಪೂರ್ಣವಾಗಿ ಆಚರಿಸಿದರು. ಇವರ ಈ ಕೊಡುಗೆಯನ್ನು ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ಸಂತೋಷ ಕುಮಾರ್ ಮತ್ತು ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಉಪಾಧ್ಯಕ್ಷೆ ಶ್ರೀಮತಿ ಸ್ನೇಹಲತಾ ದಿವಾಕರ್ ಇವರು ಸ್ವೀಕರಿಸಿದರು. ದಂಪತಿಗಳು ವಿವಾಹ ವಾರ್ಷಿಕೋತ್ಸವ ದಿನವನ್ನು ಇವರ ಮನೆಯಲ್ಲಿಯೇ ಹಾರ ಬದಲಾಯಿಸಿ, ರಾಗಿ ಹಾಲ್ಬಾಯ್ ಕಟ್ ಮಾಡುವ ಮೂಲಕ ವಿಶಿಷ್ಟ ರೀತಿಯಲ್ಲಿ ಆಚರಿಸಿದರು.

ಕೊಡುಗೈ ದಾನಿ ಎಂದೆನಿಸಿಕೊಂಡ ಈ ದಂಪತಿಗಳು ಸುರತ್ಕಲ್ ಸ್ಥಾನಿಕ ಸಂಘ ಅವರು ಕಲಿಸಿದ ಸರಕಾರಿ ಚಿತ್ರಾಪುರ ಶಾಲೆಯ ಮಕ್ಕಳಿಗೆ ಹಲವಾರು ವರ್ಷಗಳಿಂದ ಉಚಿತ ನೋಟ್‌ಬುಕ್ ವಿತರಣೆ, ಶಾಲೆಯಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಗಳಿಗೆ ಹೀಗೆ ಹತ್ತು ಹಲವು ರೀತಿಯಲ್ಲಿ ತಮ್ಮ ತನು-ಮನ-ಧನಸಹಾಯ ನೀಡುತ್ತಿದ್ದಾರೆ.

ಮಂಗಳೂರು ಮಣ್ಣಗುಡ್ಡ 'ಅಭ್ಯುದಯ' ನಿವಾಸಿಗಳಾದ ಶ್ರೀ ಎನ್. ಎಸ್. ರಾಜರಾಮ್ ಮತ್ತು ಶ್ರೀಮತಿ ರಮಾವಾಣಿ ದಂಪತಿಗಳು ರೂ. **50,000** ದೇಣಿಗೆ ನೀಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾರ್ಥಿ ನಿಧಿಯನ್ನು ಸ್ಥಾಪಿಸಿದ್ದಾರೆ ಹಾಗೂ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **10,000** ದೇಣಿಗೆ ನೀಡಿದ್ದಾರೆ. ಅವರನ್ನು ಶ್ರೀ ಸಭಾದಿಂದ ಅವರ ನಿವಾಸಕ್ಕೆ ತೆರಳಿ ಪುಷ್ಪಗುಚ್ಛ ನೀಡಿ ಅಭಿನಂದಿಸಲಾಯಿತು. ಶ್ರೀ ಸಭಾದ ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.





ಬೆಂಗಳೂರು ನಿವಾಸಿಗಳಾದ ಶ್ರೀ ರಾಜಶೇಖರ ಶರ್ಮ ಮತ್ತು ಶ್ರೀಮತಿ ಅನುಪಮರವರ ಪುತ್ರ ಶ್ರೀ ಅರ್ಪಿತ್ ಶರ್ಮ ಮತ್ತು ಶ್ರೀಮತಿ ಸ್ನೇಹಾ ದಂಪತಿಗಳು ರೂ. **50,000** ಮತ್ತು ಮಂಗಳೂರಿನ ಡಾ. ದಿವಾಕರ ಮತ್ತು ಶ್ರೀಮತಿ ಸ್ನೇಹಲತ ದಂಪತಿಗಳು ರೂ. **15,000** ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ದೇಣಿಗೆ ನೀಡಿದ್ದಾರೆ. ಅವರನ್ನು ಶ್ರೀ ಸಭಾದಿಂದ ಅವರ ನಿವಾಸಕ್ಕೆ ತೆರಳಿ ಪುಷ್ಪಗುಚ್ಛ ನೀಡಿ ಅಭಿನಂದಿಸಲಾಯಿತು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರು, ಶ್ರೀ ಸಂತೋಷ್ ಯು., ಮಹಿಳಾ ವೇದಿಕೆ ಗೌರವ ಅಧ್ಯಕ್ಷೆ ಶ್ರೀಮತಿ ಶೈಲಜಾ ಶ್ರೀಕಾಂತ್ ಉಪಸ್ಥಿತರಿದ್ದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರು

- 'ಪ್ರಪಂಚವೊಂದು ಅದ್ಭುತವಾದ ಪುಸ್ತಕ. ಅದನ್ನು ಓದಲು ಬಾರದವನು ನಿರುಪಯುಕ್ತ'. – ಸ್ವಾಮಿ ವಿವೇಕಾನಂದ
- ಎಷ್ಟು ಸಿರಿವಂತರೆಂದು ನಿರ್ಧಾರವಾಗುವುದು ಏನನ್ನು ಹೊಂದಿದ್ದೇವೆ ಎಂಬುವುದರಿಂದ ಅಲ್ಲ ಏನನ್ನು ಕೊಟ್ಟಿದ್ದೇವೆ ಎಂಬುವುದರಿಂದ.

ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್
ಪುತ್ತೂರು
ಮೊಬೈಲ್ : 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
ನಾಗರಾಜ್ ವರ್ಕಾಡಿ
ರಘುವೀರ್ ಪೆರ್ಡೂರು
ಟಿ. ಬಿ. ಮೋಹನ್ ರಾವ್
ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
ಕರುಣ್ ರಾವ್ ಬೆಳ್ಳೆ
ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು :
ಚೇತನ್ ಶರ್ಮ
ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
ಹರ್ಷಕುಮಾರ್ ಕೇದಿಗೆ

'ದೂರದೂರ ನೆಟ್ಟ ಗಿಡಗಳು ಬೆಳೆಯುತ್ತಿದ್ದಂತೆ ಒಂದಕ್ಕೊಂದು ಹತ್ತಿರವಾಗುತ್ತವೆ; ಮನುಷ್ಯರು ಮಾತ್ರ ಬೆಳೆಯುತ್ತಿರುವಂತೆ ದೂರವಾಗುತ್ತಾರೆ'!

## ಪ್ರಕಟಣೆ

ಶ್ರೀ ಸುಬ್ರಹ್ಮಣ್ಯ ಸಭೆಯು ಪುತ್ತೂರಿನ ಶಿವಸದನದಲ್ಲಿ 2021–22ನೇ ಸಾಲಿನಿಂದ ಸಮಾಜದ ಅತೀ ಬಡ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗಾಗಿ ಉಚಿತ ವಸತಿ ನಿಲಯವನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ವಸತಿ ನಿಲಯದಲ್ಲಿ 1ರಿಂದ 12ನೇ ತರಗತಿಯವರೆಗೆ ಕಲಿಯಲು ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಅವಕಾಶ ಇರುತ್ತದೆ. ವಸತಿ, ಊಟೋಪಚಾರ ಹಾಗೂ ವಿದ್ಯಾಭ್ಯಾಸದ ಎಲ್ಲಾ ಖರ್ಚುಗಳನ್ನು ಶ್ರೀ ಸಭೆಯು ಭರಿಸುತ್ತದೆ.

ಆದುದರಿಂದ ನಮ್ಮ ಸಮಾಜದ ಅತೀ ಬಡ ಕುಟುಂಬಗಳಿಂದ ಬರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹೆಚ್ಚಿನ ಮಾಹಿತಿಗಾಗಿ ಕೂಡಲೇ ಸಂಪರ್ಕಿಸಿ : **ಶ್ರೀ ಕರುಣ್ ರಾವ್ ಬೆಳ್ಳೆ, ಕಾರ್ಯದರ್ಶಿ ✆ : 7337634359/9243309120**

**ಮನವಿ :** ಸಮಾಜದ ಸಂಘ–ಸಂಸ್ಥೆಗಳ ಅಧ್ಯಕ್ಷರುಗಳು ಹಾಗೂ ಪದಾಧಿಕಾರಿಗಳಲ್ಲಿ ಮತ್ತು ಸಮಾಜ ಬಾಂಧವರಲ್ಲಿ ವಿನಂತಿಸುವುದೇನೆಂದರೆ ತಮ್ಮ ಪರಿಸರದಲ್ಲಿ ಮೇಲೆ ತಿಳಿಸಿದಂತೆ ಅರ್ಹ ವಿದ್ಯಾರ್ಥಿ/ವಿದ್ಯಾರ್ಥಿನಿಯರಿದ್ದಲ್ಲಿ ಅಂಥವರಿಗೆ ಈ ಮಾಹಿತಿಯನ್ನು ತಿಳಿಸಿ, ಅವರುಗಳು ಈ ಯೋಜನೆಯ ಲಾಭವನ್ನು ಪಡೆಯುವಂತೆ ಪ್ರೇರೇಪಿಸಬೇಕು.

ಈ ಯೋಜನೆಯನ್ನು ಪ್ರಾಯೋಜಿಸಲು ಅವಕಾಶವಿದೆ. ವಾರ್ಷಿಕ ರೂ. 60,000/– ದೇಣಿಗೆಯನ್ನಿತ್ತು ಒಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಯನ್ನು ಪ್ರಾಯೋಜಿಸಬಹುದು. ಸಮಾಜ ಬಾಂಧವರು ಹಾಗೂ ಸಮಾಜದ ಸಂಘ–ಸಂಸ್ಥೆಗಳು ಈ ಬಗ್ಗೆ ಸಹಕರಿಸಬೇಕೆಂದು ಕೋರಲಾಗಿದೆ.

**ಶ್ರೀ ಕೆ. ಹರ್ಷಕುಮಾರ್**
ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

## ಪ್ರಕಟಣೆ

**1**

2021–2022ನೇ ಸಾಲಿನಲ್ಲಿ ಪಿಯುಸಿ ಮತ್ತು ಮೇಲ್ಪಟ್ಟ ತರಗತಿಯಲ್ಲಿ ಕಲಿಯುವ ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿದ್ಯಾರ್ಥಿವೇತನವನ್ನು ಪಡೆಯಲು ದಿನಾಂಕ 30–11–2021ರ ಒಳಗೆ ತಲುಪುವಂತೆ ಅರ್ಜಿಯನ್ನು **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣಪತ್ರವನ್ನು ಲಗ್ತೀಕರಿಸಬೇಕು.

**ಅರ್ಜಿ ಫಾರ್ಮುಗಳು ದೊರೆಯುವ ವಿಳಾಸಗಳು ಈ ಕೆಳಗಿನಂತಿವೆ.**

- ❖ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು, ಪುತ್ತೂರು, ಬೆಳ್ತಂಗಡಿ, ಸುರತ್ಕಲ್, ಸುಳ್ಯ, ಬಿ. ಸಿ. ರೋಡ್, ಕಾರ್ಕಳ ಹಾಗೂ ವಿಟ್ಲ ಶಾಖೆಗಳು
- ❖ ಶ್ರೀ ಕೆ. ಹರ್ಷಕುಮಾರ್, ಪ್ರಮೋದ್ ಆಟೋಮೊಬೈಲ್, ಕರಂಗಲ್ಪಾಡಿ, ಮಂಗಳೂರು
- ❖ ಶ್ರೀ ಬಿ. ಎಸ್. ಅನಿಲ್ ರಾವ್, ವಿಶ್ರಾಮ್ ಮೋಟಾರ್ಸ್, ಕೊಡಿಯಾಲ್‌ಬೈಲ್, ಮಂಗಳೂರು
- ❖ ಶ್ರೀ ಉಮೇಶ್ ಶಾನ್‌ಭಾಗ್, ಮೂಕಾಂಬಿಕಾ ಟಿಂಬರ್ಸ್, ಕಿರಿಮಂಜೇಶ್ವರ, ಕುಂದಾಪುರ
- ❖ ಸುಲಗ್ನ ಮಾಸಪತ್ರಿಕೆ, ಉಡುಪಿ ❖ ಶ್ರೀ ಶಾರದಾಮಂಟಪ, ಕುಂಜಿಬೆಟ್ಟು, ಉಡುಪಿ
- ❖ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ
- ❖ ಶ್ರೀ ಶಾಲಿಪುರ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ, ಬೆಳ್ತಂಗಡಿ ತಾಲೂಕು
- ❖ ಶ್ರೀ ಎಂ. ಎಸ್. ಅರುಣ್ ಕುಮಾರ್, ದಿಶಾ ಬೇಕರಿ, ಉಜಿರೆ
- ❖ ಶ್ರೀ ದೇವಾನಂದ ಭಟ್, ಅಧ್ಯಕ್ಷರು, ಬ್ರಾಹ್ಮಣ ಸಭಾ, ಮೂಡಬಿದ್ರೆ
- ❖ ಶ್ರೀ ಕೇಶವ ಕೆ. ಎಸ್., 'ಮಾತೃಶ್ರೀ', ಎಸ್.ಡಿ.ಪಿ. ದೇವಸ್ಥಾನದ ಹತ್ತಿರ ಜೋಡುರಸ್ತೆ, ಕುಕ್ಕುಂದೂರು, ಕಾರ್ಕಳ
- ❖ ಶ್ರೀ ಎಂ. ಕೆ. ಮೋಹನ್ ರಾವ್, ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಂಘ, ಪಡುಬಿದ್ರೆ
- ❖ ಶ್ರೀ ಎಂ. ಎಸ್. ರಘುನಾಥ ರಾವ್, ರಾಜೇಶ್ ಪವರ್ ಪ್ರೆಸ್, ದರ್ಬೆ, ಪುತ್ತೂರು
- ❖ ಶ್ರೀ ಎನ್. ಎಸ್. ನಟರಾಜ್, ಪುತ್ತೂರು ❖ ಡಾ. ಸದಾಶಿವ ರಾವ್, ಜ್ಯೋತಿ ಆಸ್ಪತ್ರೆ, ಸುಳ್ಯ
- ❖ ಶ್ರೀ ಬಿ. ಭಾಸ್ಕರ್ ರಾವ್, ಬಾಯಂಬು, ಸುಳ್ಯ
- ❖ ಶ್ರೀ ತ್ರಿಶೂಲಿನಿ ದುರ್ಗಾಪರಮೇಶ್ವರೀ ದೇವಸ್ಥಾನ, ಬಳ್ಪ, ಸುಳ್ಯ ತಾಲೂಕು

ತಾ. 6–07–2021 **ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

**2**

ಶ್ರೀ ಕೂಡ್ಲು ವಿಷ್ಣು ಶಾನ್‌ಭಾಗರು ತಮ್ಮ ಪತ್ನಿ ಶ್ರೀಮತಿ ಕೂಡ್ಲು ಪ್ರೇಮಾವತಿ ಅಮ್ಮ ಸ್ಮಾರಕ ನಿಧಿಯನ್ನು ರೂ. 1,05,000/– ವಂತಿಗೆಯೊಂದಿಗೆ ಸ್ಥಾಪಿಸಿ ವೈದ್ಯಕೀಯ ಶಿಕ್ಷಣ ಪಡೆಯುವ ನಮ್ಮ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ. ಅಂತೆಯೇ ಅವರು ತಮ್ಮ ಪುತ್ರ ಕೂಡ್ಲು ಕೇಶವ ಶಾನುಭಾಗರ ಸ್ಮಾರಕ ನಿಧಿಯನ್ನು ರೂ. 1,00,000/– ವಂತಿಗೆಯೊಂದಿಗೆ ಸ್ಥಾಪಿಸಿ ಸಿ.ಎ. ಕಲಿಯುವ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ.

2021–2022ನೇ ಸಾಲಿನ ಮೇಲಿನ ಎರಡು ನಿಧಿಗಳ ಪಾರಿತೋಷಕವನ್ನು ಶ್ರೀ ಸಭೆಯು ನವಂಬರ್ 2021ರಲ್ಲಿ ನಡೆಯುವ ನಾಡಹಬ್ಬದ ಸಂದರ್ಭದಲ್ಲಿ ವಿತರಿಸಲಿದೆ. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 30–11–2021ರ ಒಳಗೆ ತಲುಪುವಂತೆ ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.

ತಾ. 6–07–2021 **ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

**3**

2021–2022ನೇ ಸಾಲಿನಲ್ಲಿ ಶ್ರೀ ಸಭೆಯು ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು (ಬಿ.ಇ., ಎಂ.ಇ., ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ಪಾಲಿಟೆಕ್ನಿಕ್, ಐ.ಟಿ.ಐ., ಎಂ.ಎ., ಎಂ.ಎಸ್.ಸಿ., ಎಂ.ಕಾಂ., ಸಿ.ಎ., ಬಿ.ಎಡ್., ಡಿ.ಎಡ್.) ಪಡೆಯಲು ಸಾಲ ವಿದ್ಯಾರ್ಥಿವೇತನವನ್ನು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹವಿದ್ಯಾರ್ಥಿಗಳು ಬಿಳಿ ಹಾಳೆಯಲ್ಲಿ ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇವರಿಗೆ ಅರ್ಜಿಯನ್ನು ಬರೆಯಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣಪತ್ರವನ್ನು ಲಗ್ತೀಕರಿಸಬೇಕು.

ಈ ಹಿಂದೆ ಸಾಲ ವಿದ್ಯಾರ್ಥಿವೇತನವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2021–2022ನೇ ಸಾಲಿನ ಕಂತನ್ನು ಪಡೆಯಲು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ತಾ. 6–07–2021 **ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

**4**

ಶ್ರೀಮತಿ ಶ್ಯಾಮಲ ಎಸ್. ರಾವ್ ತಮ್ಮ ಪತಿ ಶ್ರೀ ಎ. ಸೂರ್ಯಪ್ರಕಾಶ್ ರಾವ್ ಇವರ ಸ್ಮರಣಾರ್ಥ ನಮ್ಮ ಸಮಾಜದ ಬಡಕುಟುಂಬದಿಂದ ಬರುವ ಎಸ್.ಎಸ್.ಎಲ್.ಸಿ.ಯಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ.

2021–2022ನೇ ಸಾಲಿನ ಮೇಲಿನ ಪ್ರೋತ್ಸಾಹಧನವನ್ನು ಶ್ರೀ ಸಭೆಯು ನವಂಬರ್ 2021ರಲ್ಲಿ ನಡೆಯುವ ನಾಡಹಬ್ಬದ ಸಂದರ್ಭದಲ್ಲಿ ವಿತರಿಸಲಿದೆ. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ 30–11–2021ರ ಒಳಗೆ ತಲುಪುವಂತೆ ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ.ಯ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.

ತಾ. 6–07–2021 **ಶ್ರೀ ಕರುಣ್ ರಾವ್ ಬೆಳ್ಳೆ,** ಕಾರ್ಯದರ್ಶಿ

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

Prop. : Kishore Kumar Kedige
Ph. : 2231524
M. : 9880726325

KYADIGE AUTOMOBILES
Opp. to D. P. Stores Main Road, B. C. Road, Bantwal Tq.
Dealers in : 2 & 3 WHEELERS SPARES



ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ



## ನ್ಯೂಡೆಲ್ಲಿಯ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯಿಂದ ಡಾ। ಎ. ಪಿ. ಕೃಷ್ಣ ಅವರ ಪುಸ್ತಕ ಪ್ರಕಟಣೆ







ಡಾ। ಎ. ಪಿ. ಕೃಷ್ಣರವರು ಬರೆದ 'Fundamentals of Medical Physiology' ಎಂಬ ಪುಸ್ತಕದ ಬಿಡುಗಡೆಯ ಸಂಭ್ರಮದ ಕಾರ್ಯಕ್ರಮ ನಿಟ್ಟೆ ವಿಶ್ವವಿದ್ಯಾಲಯದ ಸಭಾಭವನದಲ್ಲಿ ನೆರವೇರಿತು. ಡಾ। ಎ. ಪಿ. ಕೃಷ್ಣರವರು ಬರೆದ ತೃತೀಯ ವೈದ್ಯಕೀಯ ಪುಸ್ತಕವನ್ನು 'Innovative Publishers, New Delhi' ಎಂಬ ಪ್ರಕಾಶನ ಸಂಸ್ಥೆ ಹೊರತಂದಿದೆ. ನಿಟ್ಟೆ ವಿಶ್ವವಿದ್ಯಾಲಯದ ಗೌರವಾನ್ವಿತ ಉಪಕುಲಪತಿಗಳಾದ ಡಾ। ಸತೀಶ ಕುಮಾರ್ ಭಂಡಾರಿಯವರು ಪುಸ್ತಕ ಬಿಡುಗಡೆಗೊಳಿಸಿದರು. ಡಾ। ಭಂಡಾರಿಯವರು ತಮ್ಮ ಭಾಷಣದಲ್ಲಿ ನಿಟ್ಟೆ ವಿಶ್ವವಿದ್ಯಾಲಯದೊಂದಿಗಿನ ಡಾ। ಎ. ಪಿ. ಕೃಷ್ಣರವರ ಸುದೀರ್ಘ ಬಾಂಧವ್ಯವನ್ನು ನೆನಪಿಸಿಕೊಂಡರು. ಈ ಪುಸ್ತಕದಲ್ಲಿ ಬಳಸಿದ ಭಾಷೆಯ ಸರಳತೆಯಿಂದಾಗಿ ಮತ್ತು ನಿರೂಪಣಾ ಶೈಲಿಯ ಪ್ರೌಢಿಮೆಯಿಂದಾಗಿ ಈ ಪುಸ್ತಕವು MBBS ಕಲಿಯುವ ವಿದ್ಯಾರ್ಥಿಗಳಿಗೆ ತುಂಬಾ ಪ್ರಯೋಜನಕಾರಿಯಾಗಬಹುದು. ಅಂತೆಯೇ ಶಿಕ್ಷಕವರ್ಗದವರಿಗೂ ಮಾರ್ಗಸೂಚಿ ಗ್ರಂಥವಾಗಬಹುದು ಎಂದು ಅಭಿಪ್ರಾಯಪಟ್ಟರು. ಇಂತಹ ಉತ್ತಮ ಪುಸ್ತಕವನ್ನು ಹೊರತಂದುದಕ್ಕೆ ಡಾ। ಕೃಷ್ಣರವರನ್ನು ಮುಕ್ತಕಂಠದಿಂದ ಅಭಿನಂದಿಸುತ್ತಾ ಅವರಿಗೆ ಹಾಗೂ ಪುಸ್ತಕಕ್ಕೆ ಶುಭಹಾರೈಸಿದರು.

ಡಾ। ಎ. ಪಿ. ಕೃಷ್ಣ ಅವರ ಹಲವಾರು ಸಂಶೋಧನಾ ಪ್ರಬಂಧಗಳು ದೇಶೀಯ ಹಾಗೂ ಅಂತರ್ದೇಶೀಯ ವೈದ್ಯಕೀಯ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ.

ನಿಟ್ಟೆ ವಿಶ್ವವಿದ್ಯಾಲಯದ ಸಹಕುಲಪತಿಗಳಾದ ಡಾ। ಎಂ. ಎಸ್. ಮೂಡಿತ್ತಾಯ, ರಿ. ಡೈರೆಕ್ಟರ್ ಕರಿಕ್ಯುಲಮ್ ಡೈರೆಕ್ಟರ್, ಕರಿಕ್ಯುಲಮ್ ಡೆವಲಪ್‌ಮೆಂಟ್ ಡಾ। ಹರ್ಷ ಹೆಚ್. ಎನ್., ಫಿಸಿಯೋಲಜಿ ವಿಭಾಗದ ಪ್ರಾಚಾರ್ಯರಾದ ಡಾ। ಶೈಲಜಾ ಮೂಡಿತ್ತಾಯ ಮುಂತಾದ ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದು ಡಾ। ಕೃಷ್ಣ ಅವರಿಗೆ ಶುಭಕೋರಿದರು.

ಶ್ರೀಮತಿ ಸುಮನ್ ಕೃಷ್ಣರವರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ಡಾ। ಕೃಷ್ಣರವರು ಪ್ರಸ್ತುತ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ ಉಪಾಧ್ಯಕ್ಷರಾಗಿ ಮತ್ತು ಶ್ರೀ ಸಭೆಯ ವಿದ್ಯಾಭ್ಯಾಸ ಸಮಿತಿಯ ಅಧ್ಯಕ್ಷರಾಗಿ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

## ನರಸಿಂಹ ಜಯಂತಿ



**ತಾರೀಕು 25-05-2021ರಂದು ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟಿನಲ್ಲಿ ನರಸಿಂಹ ಜಯಂತಿ ಪ್ರಯುಕ್ತ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಶ್ರೀ ದೇವರಿಗೆ ಕಲಶಾಭಿಷೇಕ ಹಾಗೂ ಮಹಾಪೂಜೆಯನ್ನು ಸರಕಾರದ ಮಾರ್ಗಸೂಚಿಯಂತೆ ಸರಳ ರೀತಿಯಲ್ಲಿ ಆಚರಿಸಲಾಯಿತು.**

## ಮಕ್ಕಳ ತಜ್ಞೆ ಡಾ. ಸುಲೇಖಾ ವರದರಾಜ್ ಅವರಿಗೆ 'ಜ್ಯುವೆಲ್ ಆಫ್ ಕರ್ನಾಟಕ' ಪ್ರಶಸ್ತಿಯ ಗೌರವ




ಪುತ್ತೂರು ಇ.ಎಸ್.ಐ. ಆಸ್ಪತ್ರೆಯ ವೈದ್ಯಾಧಿಕಾರಿಯೂ ಮಕ್ಕಳ ತಜ್ಞೆಯೂ ಆಗಿರುವ ಡಾ. ಸುಲೇಖಾ ವರದರಾಜ್ ಅವರಿಗೆ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಶಿಯನ್ಸ್‌ನ ರಾಜ್ಯ ಸಮ್ಮೇಳನದಲ್ಲಿ 'ಜ್ಯುವೆಲ್ ಆಫ್ ಕರ್ನಾಟಕ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಮಕ್ಕಳ ತಜ್ಞರಾಗಿ ವೈದ್ಯಕೀಯ ಸೇವೆಯಲ್ಲಿ ಮಾಡಿದ ಸೇವೆಯನ್ನು ಪರಿಗಣಿಸಿ ರಾಜ್ಯಮಟ್ಟದ ಈ ಪ್ರಶಸ್ತಿಯನ್ನು ನೀಡಲಾಗಿದೆ. ಮಾರ್ಚ್ 14ರಂದು ಮಂಗಳೂರಿನ ಎ. ಜೆ. ಮೆಡಿಕಲ್ ಕಾಲೇಜಿನಲ್ಲಿ ನಡೆದ ಮಕ್ಕಳ ತಜ್ಞರ ಐಎಪಿ ರಾಜ್ಯ ಸಮ್ಮೇಳನದಲ್ಲಿ ಐಎಪಿಯ ನಿಯೋಜಿತ ರಾಷ್ಟ್ರೀಯ ಅಧ್ಯಕ್ಷರಾದ ಡಾ. ರಮೇಶ್ ಕುಮಾರ್ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಐಎಪಿ ರಾಜ್ಯ ಅಧ್ಯಕ್ಷರಾದ ಡಾ. ಅಶೋಕ್ ದಾತಾರ್, ಜಿಲ್ಲಾ ಅಧ್ಯಕ್ಷರಾದ ಡಾ. ಮುರಳಿಕೃಷ್ಣ, ಕಾರ್ಯದರ್ಶಿ ಡಾ. ಶ್ರೀಕೃಷ್ಣ ಮುಂತಾದವರು ಉಪಸ್ಥಿತರಿದ್ದರು.

ಮಕ್ಕಳ ತಜ್ಞೆಯಾಗಿ, ಹದಿಹರೆಯದ ಮಕ್ಕಳ ಮಾನಸಿಕ ತೊಂದರೆಗಳಿಗೆ ಆಪ್ತಸಲಹೆಗಾರರಾಗಿ ಗುರುತಿಸಿಕೊಂಡಿರುವ ಡಾ. ಸುಲೇಖಾ ಅವರು ಅಡೊಲೆಸೆಂಟ್ ಹೆಲ್ತ್ ಅಕಾಡೆಮಿಯಡಿಯಲ್ಲಿ ಮಂಗಳೂರು, ಬೆಂಗಳೂರು, ಹುಬ್ಬಳ್ಳಿ, ಶಿವಮೊಗ್ಗ ಮುಂತಾದೆಡೆಗಳಲ್ಲದೆ ಆಗ್ರಾ, ಇಂದೋರ್, ಮುಂಬಯಿ, ನಾಗಪುರ ಮುಂತಾದೆಡೆಗಳಲ್ಲಿ ನಡೆದ ಸಮ್ಮೇಳನಗಳಲ್ಲೂ ಕಾರ್ಯಾಗಾರಗಳಲ್ಲೂ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಹದಿಹರೆಯದ ವಿದ್ಯಾರ್ಥಿಗಳಿಗೂ, ಪೋಷಕರಿಗೂ, ವಿವಿಧ ಸಂಘ ಸಂಸ್ಥೆಗಳ ಸದಸ್ಯರಿಗೂ ನೂರಾರು ತರಬೇತಿಗಳನ್ನೂ, ಉಪನ್ಯಾಸಗಳನ್ನೂ ನೀಡಿರುವ ಡಾ. ಸುಲೇಖಾ ವರದರಾಜ್ ಅವರ ವೈದ್ಯಕೀಯ ಲೇಖನಗಳು ಹಲವಾರು ವೈದ್ಯಕೀಯ ನಿಯತಕಾಲಿಕಗಳಲ್ಲೂ ಪ್ರಜಾವಾಣಿ, ಹೊಸದಿಗಂತ, ತರಂಗ ಮುಂತಾದ ಪತ್ರಿಕೆಗಳಲ್ಲೂ ಪ್ರಕಟವಾಗಿವೆ. ವಿವಿಧ ಚಾನಲ್‌ಗಳಲ್ಲೂ ಇವರ ವೈದ್ಯಕೀಯ ಸಂದರ್ಶನಗಳು ಪ್ರಸಾರವಾಗಿವೆ.

ಇವರು ಕಾಸರಗೋಡಿನ ಶ್ರೀ ಮರ್ದಂಬೈಲು ಉಮೇಶ ರಾವ್ ಹಾಗೂ ಶ್ರೀಮತಿ ಸರಸ್ವತಿ ಯು. ರಾವ್ ಇವರ ಪುತ್ರಿ. ಪುತ್ತೂರು ಬೆಟ್ಟಂಪಾಡಿ ಸರ್ಕಾರಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ವರದರಾಜ ಚಂದ್ರಗಿರಿ ಅವರ ಪತ್ನಿ.

## ವಿವಾಹ ವಾರ್ಷಿಕೋತ್ಸವದ ಕೊಡುಗೆ



ಶ್ರೀ ಸದಾಶಿವ ಶಾಸ್ತ್ರಿ ಮತ್ತು ಶ್ರೀಮತಿ ಸೌಭದ್ರಾ ಶಾಸ್ತ್ರಿ ದಂಪತಿಗಳು ತಮ್ಮ 39ನೇ ವಿವಾಹ ವಾರ್ಷಿಕೋತ್ಸವವನ್ನು ಹನ್ನೊಂದು ಕುಟುಂಬಗಳಿಗೆ ದೈನಂದಿನ ಉಪಯೋಗಿಸುವ ದಿನಸಿ ಸಾಮಗ್ರಿಗಳನ್ನು ಕೊಡುವುದರ ಮೂಲಕ ಆಚರಿಸಿದರು.

*Prop. : P. Srikanth Rao* Mobile : 9343361618

**M/s. SAMARPAN**

**HOUSE OF STATIONERY**


"Vijaya Nivas", Opp. Pio Mall
Bejai Church Road, Mangalore - 4



ಪತ್ರಿಕೆಗೆ ಶುಭ ಬಯಸುವ-

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

## ಎಲೆಮರೆಯ ಕಾಯಿ ನೆಲ್ಲಿಕುಂಜೆ ಸುಬ್ಬ ರಾವ್



ನೆಲ್ಲಿಕುಂಜೆ ರಾಮಪ್ಪಯ್ಯ – ಗೋಪಯ್ಯ ದಂಪತಿಗಳ ಜ್ಯೇಷ್ಠ ಪುತ್ರರಾಗಿ 1930 ಅಗೋಸ್ತು 13ರಂದು ಜನಿಸಿದ ನೆಲ್ಲಿಕುಂಜೆ ಸುಬ್ಬ ರಾವ್ ತಮ್ಮ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲಾ ಶಿಕ್ಷಣವನ್ನು ಪೆರ್ಲ ಶ್ರೀ ಸತ್ಯನಾರಾಯಣ ಹೈಸ್ಕೂಲಿನಲ್ಲಿ ಪೂರೈಸಿದರು. ಬಾಲ್ಯದಿಂದಲೇ ಶಿವಾಜಿ, ಚಂದ್ರಶೇಖರ ಆಜಾದ್ ಈ ಮೊದಲಾದ ಮಹಾನ್ ವ್ಯಕ್ತಿಗಳಿಂದ ಪ್ರೇರೇಪಿತರಾದ ಇವರು ಅಪಾರ ದೇಶಪ್ರೇಮವನ್ನು ಹೊಂದಿದವರಾಗಿದ್ದರು. ಹೈಸ್ಕೂಲ್ ಶಿಕ್ಷಣದ ಸಮಯದಲ್ಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದ ಇವರು ಶಾಲಾಸಮಯ ಮುಕ್ತಾಯದ ನಂತರ ಪ್ರತಿದಿನ ಹೈಸ್ಕೂಲ್ ಪಕ್ಕದಲ್ಲೇ ಇರುವ ಶ್ರೀ ಸತ್ಯನಾರಾಯಣ ಮಂದಿರದಲ್ಲಿ RSS ಶಾಖೆಯನ್ನು ಪ್ರಾರಂಭಿಸಿ ಸಂಘದ ಚಟುವಟಿಕೆಗಳು ಪೆರ್ಲದಲ್ಲಿ ಆರಂಭವಾಗಲು ಕಾರಣೀಭೂತರಾದರು. ಅವಕಾಶವಾದಿಗಳ ಒತ್ತಡಕ್ಕೆ ಮಣಿದ ಶಾಲಾ ಸಮಿತಿಯು ಶಾಖೆ ನಡೆಸುವ ವಿಷಯಕ್ಕಾಗಿ ಇವರನ್ನು ಮೂರು ದಿನಗಳ ಕಾಲ ಅಮಾನತುಗೊಳಿಸಿದ್ದರು. ಬಳಿಕ ಶಾಲಾನಿಯಮಗಳಿಗೆ ತೊಂದರೆಯಾಗುವಂತಹ ಯಾವುದೇ ಕೆಲಸಗಳನ್ನು ಮಾಡುವುದಿಲ್ಲವೆಂದು ಮುಚ್ಚಳಿಕೆ ಪತ್ರ ಬರೆದು ಕೊಡಬೇಕಾಯಿತು. ಹಾಗೆಯೇ ಶಾಖೆ ನಡೆಸುವುದನ್ನು ಮುಂದುವರಿಸಿದ ಅವರಿಗೆ ಮಂದಿರದಲ್ಲಿಯೂ ಶಾಖೆ ನಡೆಸುವುದಕ್ಕೆ ಅಡಚಣೆಗಳು ಎದುರಾಗಿ ಶಾಖಾ ಸ್ಥಳವನ್ನು ಬಜಕೂಡ್ಲು ದೇವಸ್ಥಾನಕ್ಕೆ ಸ್ಥಳಾಂತರಿಸಲಾಯಿತು.

ಹೈಸ್ಕೂಲ್ ಶಿಕ್ಷಣವನ್ನು ಮುಗಿಸಿ, ಮುಂದೆ 'ಪಂಡಿತ' ಪದವಿಯನ್ನು ಕಾರ್ಕಳದ 'ಶ್ರೀ ಭುವನೇಂದ್ರ' ಕಾಲೇಜಿನಿಂದ ಪಡೆದುಕೊಂಡ ಇವರು ಶಿಕ್ಷಕರಾಗಿ ಮಂಗಲ್ಪಾಡಿ ಸರಕಾರಿ ಹೈಸ್ಕೂಲಿನಲ್ಲಿ ಸೇವೆಯನ್ನು ಪ್ರಾರಂಭಿಸಿದರೂ RSS ಸಂಪರ್ಕವನ್ನು ಮುಂದುವರಿಸಿದರು. ಅಲ್ಲಿಂದ ಬೇಕಲ ಸರಕಾರಿ ಹೈಸ್ಕೂಲಿಗೆ ವರ್ಗಾವಣೆಗೊಂಡ ಇವರು ಅಲ್ಲಿ RSS ಪ್ರಚಾರಕರಾಗಿ ಜವಾಬ್ದಾರಿಯನ್ನು ನಿರ್ವಹಿಸಿದರು. ಅಲ್ಲಿ ಅನ್ಯಮತೀಯರಿಂದ, RSS ವಿರೋಧಿಗಳಿಂದ ಪ್ರಾಣಬೆದರಿಕೆಗಳು ಬಂದರೂ ಹೆದರದೆ ಬೇಕಲದ ಕೋಟೆಯ ಒಳಗೆ ಶಾಖೆಯನ್ನು ನಡೆಸುತ್ತಿದ್ದರು.

ಮುಂದೆ, ಪ್ರಾಣಾಪಾಯ ಬೆದರಿಕೆಯನ್ನು ಲೆಕ್ಕಿಸದೆ, ಪ್ರಥಮ ಬಾರಿಗೆ ಪಳ್ಳಿಕೆರೆ ಭಾಗದಲ್ಲಿ ಪೂರ್ಣ ಗಣವೇಶದ ಪಥಸಂಚಲವನ್ನು ನಡೆಸಿದ ಕೀರ್ತಿ ಇವರದು. ಗಾಂಧಿ ಹತ್ಯೆಯ ಸಂದರ್ಭದಲ್ಲಿ ಜೈಲುವಾಸವನ್ನು ಅನುಭವಿಸಿದರು.

ಶ್ರೀಮತಿ ಇಂದಿರಾಗಾಂಧಿ ತುರ್ತುಪರಿಸ್ಥಿತಿ ಹೇರಿದ ಸಂದರ್ಭದಲ್ಲಿ ಕಾಸರಗೋಡಿನ GHSನಲ್ಲಿ ಸೇವೆ ಸಲ್ಲಿಸುತ್ತಿದ್ದ ಇವರು ಶಾಲಾ ಸಮಯ ಕಳೆದ ನಂತರ RSS ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅಲ್ಲಿಂದ GHS ವಾಣೀನಗರಕ್ಕೆ ವರ್ಗಾವಣೆಗೊಂಡ ಇವರು 1988ರಲ್ಲಿ ತನ್ನ 58ನೇ ವಯಸ್ಸಿಗೆ ನಿವೃತ್ತಿಯನ್ನು ಹೊಂದಿದರು. ಸಹಧರ್ಮಿಣಿಯಾದ ಶ್ರೀಮತಿ ಸರಳಾದೇವಿ ಮನೆಯ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಂಡು, ಇವರ ಸೇವಾಮನೋಭಾವಕ್ಕೆ ಬೆಂಬಲವಾಗಿ ನಿಂತರು. ನಿವೃತ್ತ ಜೀವನವನ್ನು ತನ್ನ ನೆಲ್ಲಿಕುಂಜೆಯ ಮನೆಯಲ್ಲೇ ಕಳೆದ ಇವರು (2-05-2021) ತನ್ನ 91ನೇ ವಯಸ್ಸಿಗೆ ದೇವರ ಪಾದವನ್ನು ಸೇರಿದರು.

ಕಾಸರಗೋಡಿನಲ್ಲಿ ಶಿಕ್ಷಣ ವೃತ್ತಿಯಲ್ಲಿ ಇದ್ದಾಗಲೂ ಬೆಳಗ್ಗೆ ಮನೆಯಲ್ಲಿ ಮಕ್ಕಳೊಂದಿಗೆ ಶಾಖೆಯನ್ನು ನಡೆಸಿದ ನಂತರವೇ ಶಾಲೆಗೆ ಹೋಗುತ್ತಿದ್ದ ಇವರು, 7 ಜನ ಮಕ್ಕಳನ್ನೂ ಬಾಲ್ಯದಿಂದಲೇ RSS ಸ್ವಯಂಸೇವಕರಾಗಿ ರೂಪಿಸಿದ್ದರು. ದೈನಂದಿನ ಜೀವನವನ್ನು ಯೋಗಾಸನ, ಪ್ರಾಣಾಯಾಮಗಳ ಮೂಲಕ ಪ್ರಾರಂಭಿಸುತ್ತಿದ್ದ ಇವರು ಶಿಸ್ತಿನ ಸಿಪಾಯಿಯಾಗಿದ್ದರು. ತನ್ನ ಸಂಪರ್ಕಕ್ಕೆ ಬಂದವರಲ್ಲಿ ಧನಾತ್ಮಕ ಚಿಂತನೆಯನ್ನು ಮೂಡಿಸುತ್ತಿದ್ದರು. ಆದರ್ಶ ಕುಟುಂಬ ಹೇಗಿರಬೇಕೆಂಬ ಕಲ್ಪನೆಯನ್ನು ತಮ್ಮ 7 ಜನ ಸೊಸೆಯಂದಿರಲ್ಲಿ ಮೂಡಿಸಿದ ಇವರು ಸೊಸೆಯಂದಿರಿಗೆ ಪ್ರೀತಿಯ ಮಾವನಾಗಿದ್ದರು. ಶಿವಾಜಿ, ರಾಣಾ ಪ್ರತಾಪ, ಚಂದ್ರಶೇಖರ ಆಜಾದ್, ಸಾವರ್ಕರ್ ಮೊದಲಾದ ಆದರ್ಶ ಪುರುಷರ ಕಥೆಗಳೊಂದಿಗೆ ಮನೆಯ ಮೊಮ್ಮಕ್ಕಳ ದಿನಚರಿ ಕೊನೆಗೊಳ್ಳುತ್ತಿತ್ತು. ಇವರು 7 ಜನ ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳನ್ನು ಅಗಲಿದ್ದಾರೆ.

## ಶ್ರೀ ಸುಬ್ರಹ್ಮಣ್ಯ ಟ್ರೋಫಿ 2020
## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್

**ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ – ಇದರ ಅಂಗಸಂಸ್ಥೆ ಯುವವೇದಿಕೆಯ ವತಿಯಿಂದ 2019–2020ನೇ ಸಾಲಿನ 6ನೇ ವರ್ಷದ 'ಶ್ರೀ ಸುಬ್ರಹ್ಮಣ್ಯ ಟ್ರೋಫಿ'ಯು ದಿನಾಂಕ 4–04–2021ನೇ ರವಿವಾರದಂದು ಪಣಂಬೂರಿನ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜರಗಿತು.**

ಬೆಳಗ್ಗೆ 9–00 ಗಂಟೆಗೆ ಸರಿಯಾಗಿ ರಾಜ್ಯದಾದ್ಯಂತದಿಂದ ಸುಮಾರು 13 ತಂಡಗಳು ಭಾಗವಹಿಸಿದ್ದವು. ವೇದಿಕೆಯಲ್ಲಿ ಮಹಾನಗರ ಪಾಲಿಕೆಯ ಉಪಮೇಯರ್‌ರವರಾದ ಶ್ರೀಮತಿ ಸುಮಂಗಲ ರಾವ್, ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್, ಗೌರವಾಧ್ಯಕ್ಷರಾದ ಮಲ್ಲಮಾರು ಭವಾನಿಶಂಕರ ರಾವ್, ಸಂಘದ ಉಪಾಧ್ಯಕ್ಷರುಗಳಾದ ಶ್ರೀ ವಾಸುದೇವ ಶಾನುಭಾಗ್, ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮ, ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಸುಕುಮಾರ್ ಎಂ. ಯು. ಇವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಉಪಮೇಯರ್‌ರವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು ಹಾಗೂ ಈ ವಠಾರದಲ್ಲಿ ಬೆಳೆದಾಗ ಆಗಿನ ತಮ್ಮ ಅನುಭವವನ್ನು ಹಂಚಿಕೊಂಡರು.

ನಂತರ ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ಪರಿಮಳ ಪ್ರಶಾಂತ್‌ರವರು ಚೆಂಡನ್ನು ಎಸೆಯುವುದರೊಂದಿಗೆ ಶ್ರೀಮತಿ ಸುಮಂಗಲ ರಾವ್‌ರವರು ಬ್ಯಾಟಿಂಗ್ ಮಾಡಿ ಆಟವನ್ನು ಉದ್ಘಾಟಿಸಿದರು. 13 ತಂಡಗಳ ಪಂದ್ಯಾಟದಲ್ಲಿ ಕೊನೆಗೆ ಫೈನಲ್ ಆಟಕ್ಕೆ ಪ್ರವೇಶವನ್ನು ಪಡೆದ ನಂದಳಿಕೆ 'ಎ' ತಂಡ ಹಾಗೂ ಮಂಗಳೂರು ತಂಡಗಳ ಮಧ್ಯೆ ರೋಚಕವಾದ ಆಟ ನಡೆದು ಕೊನೆಗೆ ನಂದಳಿಕೆ 'ಎ' ತಂಡವು ಪ್ರಥಮ ಸ್ಥಾನವನ್ನೂ, ಮಂಗಳೂರು ತಂಡವು ದ್ವಿತೀಯ ಸ್ಥಾನ ಹಾಗೂ ಟ್ರೋಫಿಗಳನ್ನು ಪಡೆದವು.

ಸಮಾರೋಪ ಸಮಾರಂಭದಲ್ಲಿ ಮಂಗಳೂರಿನ ನ್ಯಾಯವಾದಿ ಅದ್ಯಪಾಡಿ ಶ್ರೀ ಪ್ರವೀಣ್ ಕುಮಾರ್ ಮುಖ್ಯ ಅತಿಥಿಯಾಗಿಯೂ, ಪ್ರಥಮ ಸ್ಥಾನದ ಬಹುಮಾನದ ಪ್ರಾಯೋಜಕರಾದ ಶ್ರೀ ಜನಕರಾಜ್, ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದು, ಮುಖ್ಯ ಅತಿಥಿಗಳ ಮೂಲಕ ಬಹುಮಾನಗಳನ್ನು ವಿತರಿಸಲಾಯಿತು. ಉತ್ತಮ ಎಸೆತಗಾರ, ಉತ್ತಮ ದಾಂಡಿಗ, ಸರ್ವಾಂಗೀಣ ಆಟಗಾರ ಮೊದಲಾದ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಸುಕುಮಾರ್ ಎಂ. ಯು. ರವರು ನೆರವೇರಿಸಿ ಧನ್ಯವಾದಗಳನ್ನು ಅರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.


### ಆಸ್ತಿಕ ಸಮಾಜ ಬಾಂಧವರಲ್ಲಿ ವಿಜ್ಞಾಪನೆ

ನಾವು ಕೆಲವು ದಿನಗಳಿಂದೀಚೆಗೆ ಸುರತ್ಕಲ್ ಸಮೀಪ ಎದುರುಗಡೆ ಮಲ್ಲಮಾರು ಬೀಚ್ ರಸ್ತೆಯಲ್ಲಿರುವ ಶ್ರೀ ಭವಾನಿಶಂಕರ ರಾಯರ ಮನೆಯ ಹತ್ತಿರ **'ಶ್ರೀ ದುರ್ಗಾ ಕೃಪಾ ಸಭಾಂಗಣ'**ದಲ್ಲಿ ಎಲ್ಲಾ ರೀತಿಯ ಸಮಾರಂಭಗಳನ್ನು (ಪೂಜೆ, ಶಾಂತಿಹೋಮ, ಉಪನಯನ, ಮದುವೆ, ವೈದಿಕ ಹಾಗೂ ಅಪರಕ್ರಿಯೆ) ವಿಧಿವತ್ತಾಗಿ ನಡೆಸಿಕೊಂಡು ಬರುತ್ತಿದ್ದೇವೆ. ಎಲ್ಲರಿಗೂ ಅನುಕೂಲವಾಗುವಂತೆ ಕಡಿಮೆ ವೆಚ್ಚದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಡಲಾಗುವುದು. ಸಮಾಜ ಬಾಂಧವರು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿಸುತ್ತೇವೆ.

ಆಸಕ್ತರು ಕೆಳಗೆ ನಮೂದಿಸಿದ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಿ ತಮ್ಮ ಕಾರ್ಯಕ್ರಮಗಳನ್ನು ನಿಗದಿಪಡಿಸಿಕೊಳ್ಳಬಹುದು.

**ಪ್ರವೀಣ್‌ಕುಮಾರ್ : 9448953331 ಸತೀಶ್ ರಾವ್ : 9845700060**

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**



Sri Hari Adyapady
Proprietor



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**

*We undertake all types of Electrical, Plumbing and Sanitary works*



ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**
**ಕದ್ರಿ, ಮಂಗಳೂರು - 575 003**

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
**ಪ್ರಮೋದ್ ಟವರ್ಸ್, ಮಂಗಳೂರು**

## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಕೊಕ್ರಾಡಿ ಶ್ರೀ ರಾಮಕೃಷ್ಣ ರಾಯರ ಸುಪುತ್ರ **ಚಿ। ಶ್ರೀನಿವಾಸ್** ಹಾಗೂ ಸಾವ್ಯ ಗ್ರಾಮದ ಶ್ರೀ ನಾರಾಯಣ ಆಚಾರ್ಯರ ಸುಪುತ್ರಿ **ಚಿ। ಸೌ। ಸುನಂದಾ** ಇವರ ವಿವಾಹವು ತಾರೀಕು 25–04–2021ನೇ ರವಿವಾರ ಅಂಡಿಂಜೆ 'ಶ್ರೀ ಮಹಾಗಣಪತಿ ಸಭಾಭವನ'ದಲ್ಲಿ ನೆರವೇರಿತು.

❖❖❖

ಚಿತ್ರಾಪುರ ಶ್ರೀ ರಾಘವೇಂದ್ರ ರಾವ್ ಮತ್ತು ಶ್ರೀಮತಿ ಸಂಧ್ಯಾರವರ ಸುಪುತ್ರ **ಚಿ। ಅಭಯಚಂದ್ರ** ಹಾಗೂ ನಂದಳಿಕೆ ಶ್ರೀ ಶಿವರಾಮ ಮತ್ತು ಶ್ರೀಮತಿ ನಳಿನಾಕ್ಷಿಯವರ ಸುಪುತ್ರಿ **ಚಿ। ಸೌ। ಸೌಮ್ಯ** ಇವರ ವಿವಾಹವು ತಾರೀಕು 13–05–2021 ಗುರುವಾರ ನಂದಳಿಕೆ 'ಶ್ರೀ ಮಹಾಲಿಂಗೇಶ್ವರ ದೇವಸ್ಥಾನ'ದಲ್ಲಿ ನಡೆಯಿತು.

❖❖❖

ನಂದಾವರ ಶ್ರೀ ಶಶಿಶೇಖರ್ ರಾವ್ ಮತ್ತು ಶ್ರೀಮತಿ ಮಂಜುಳಾ ರಾವ್‌ರವರ ಪುತ್ರ **ಚಿ। ಶಶಾಂಕ್ ರಾವ್** ಹಾಗೂ ಪಡುಬಿದ್ರಿ ಶ್ರೀ ರಾಜೇಂದ್ರ ರಾವ್ ಮತ್ತು ಶ್ರೀಮತಿ ಗಾಯತ್ರಿ ರಾವ್‌ರವರ ಪುತ್ರಿ **ಚಿ। ಸೌ। ಅಪೂರ್ವ ರಾವ್** ಇವರ ವಿವಾಹ ತಾರೀಕು 3–5–2021ರ ಸೋಮವಾರ ಪಡುಬಿದ್ರಿಯಲ್ಲಿ ನಡೆಯಿತು.

❖❖❖

ತಂತ್ರಾಡಿ ಶ್ರೀ ಸುಬ್ರಹ್ಮಣ್ಯ ರಾವ್ ಮತ್ತು ಶ್ರೀಮತಿ ಸುಕನ್ಯಾರವರ ಸುಪುತ್ರ **ಚಿ। ಗಿರೀಶ್** ಹಾಗೂ ಮರಾಡಿ ಶ್ರೀ ಸದಾಶಿವ ಮತ್ತು ಶ್ರೀಮತಿ ಸುಕನ್ಯಾರವರ ಪುತ್ರಿ **ಚಿ। ಸೌ। ಸೌಮ್ಯ** ಇವರ ವಿವಾಹ ತಾ. 28–5–2021ನೇ ಶುಕ್ರವಾರ ಬ್ರಹ್ಮಾವರದಲ್ಲಿ ನೆರವೇರಿತು.

❖❖❖

ಕಿಲ್ಲೂರು ಶ್ರೀ ಸಂತೋಷ ಕುಮಾರ್ ಮತ್ತು ಶ್ರೀಮತಿ ವಿದ್ಯಾರವರ ಸುಪುತ್ರ **ಚಿ। ವಿಶ್ವಾಸ್** ಹಾಗೂ ಶ್ರೀಮತಿ ಎ. ಆರ್. ಉಲ್ಲಾಸ್ ರಾವ್ ಮತ್ತು ಶ್ರೀಮತಿ ನಾಗವೇಣಿಯವರ ಸುಪುತ್ರಿ **ಚಿ। ಸೌ। ನೇಹಾ**ರವರ ವಿವಾಹ ತಾ. 28–5–2021ನೇ ಶುಕ್ರವಾರ ಪಡುಬಿದ್ರಿಯಲ್ಲಿ ನೆರವೇರಿತು.

## ** ಅಪಾರ ಕೀರ್ತಿ ಗಳಿಸಿ **



ಪುತ್ತೂರಿನ ಶ್ರೀ ರಾಜೇಶ್ ಎಂ.ಆರ್. ಮತ್ತು ಶ್ರೀಮತಿ ಸಪ್ನಾ ಆರ್. ರಾವ್ ಇವರ ಪುತ್ರಿ ಹಾಗೂ ಪುತ್ತೂರು ಅಂಬಿಕಾ ಪದವಿಪೂರ್ವ ವಿದ್ಯಾಲಯದ ವಿದ್ಯಾರ್ಥಿನಿ

**ಕು. ಅನಘಾ ರಾವ್**


ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ. 100 (600 / 600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.

ಇವಳು ಪುತ್ತೂರು ರಾಜೇಶ್ ಪವರ್ ಪ್ರೆಸ್ ಮ್ಹಾಲಕರಾದ ಶ್ರೀ ಎಂ. ಎಸ್. ರಘುನಾಥ ರಾವ್ ಮತ್ತು ಶ್ರೀಮತಿ ಶ್ಯಾಮಲಾ ಆರ್. ರಾವ್ ಇವರ ಮೊಮ್ಮಗಳು.

ಡಾ. ಗಣಪತಿ ಐಯ್ಯರ್ ಮತ್ತು ಶ್ರೀಮತಿ ಆರತಿ ಶ್ಯಾನುಭೋಗ್ ಇವರ ಪುತ್ರ ಹಾಗೂ ತಲಪಾಡಿಯ ಶಾರದಾ ವಿದ್ಯಾನಿಕೇತನ ಇದರ ವಿದ್ಯಾರ್ಥಿ

**ಚಿ। ಶಿಶಿರ ಐಯ್ಯರ್**

ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ (592 / 600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ.



## ಪದೋನ್ನತಿ

ದಿ। ಎಂ. ಎಸ್. ಬಾಲಚಂದ್ರ ರಾವ್ ಮತ್ತು ಪಡುಬಿದ್ರಿ ಶ್ರೀಮತಿ ರಾಜೇಶ್ವರಿ ಇವರ ಪುತ್ರ ಮಂಕುಡೆ **ಶ್ರೀ ಸೂರ್ಯನಾರಾಯಣ** ಇವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಕೇರಳ ವೃತ್ತದ **ಡಿಜಿಎಂ** ಆಗಿ ಪದೋನ್ನತಿ ಹೊಂದಿದ್ದಾರೆ.





**ಶ್ರೀಮತಿ ಶ್ರುತಿ ಬೆಳ್ಳೆ**ಯವರು ಕೆನಡಾದ ಪ್ರತಿಷ್ಠಿತ ATB ಹಣಕಾಸು ಸಂಸ್ಥೆಯ ನಿರ್ದೇಶಕರಾಗಿ ಪದೋನ್ನತಿ ಗೊಂಡಿದ್ದಾರೆ. ಇವರು ಶ್ರೀ ರಾಮಮೋಹನ್ ಬೆಳ್ಳೆ ಮತ್ತು ಶ್ರೀಮತಿ ವೀಣಾರವರ ಸುಪುತ್ರಿ ಹಾಗೂ ಶ್ರೀ ಪ್ರಶಾಂತ್ ಸೌತೆಕಲ್‌ರವರ ಧರ್ಮಪತ್ನಿ.

## ಡಾ। ಪ್ರಭಾಕರ ರಾವ್‌ಗೆ ಸನ್ಮಾನ



ಕಾಸರಗೋಡಿನ ಖ್ಯಾತ ವೈದ್ಯರಾದ **ಡಾ। ಪಿ. ಪ್ರಭಾಕರ್ ರಾವ್** ಇವರನ್ನು ಕಾಸರಗೋಡಿನ I.M.A. ವತಿಯಿಂದ ಜೀವಮಾನ ಸಾಧನಾ ಪ್ರಶಸ್ತಿ ನೀಡಿ ವೈದ್ಯರ ದಿನದಂದು ಸನ್ಮಾನಿಸಲಾಯಿತು.

## ಪ್ರಶಾಂತ್ ರಾವ್ ಅವರಿಗೆ ಪಿ.ಹೆಚ್.ಡಿ.



ಮಂಗಳೂರಿನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜ್‌ನ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರಶಾಂತ್ ರಾವ್ ಇವರಿಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು ಪಿ.ಹೆಚ್.ಡಿ. ಪದವಿಯನ್ನು ನೀಡಿ ಗೌರವಿಸಿದೆ. ಇವರು ಗಣಿತಶಾಸ್ತ್ರ ವಿಭಾಗದಲ್ಲಿ ಮಂಡಿಸಿದ 'A Study on Generalized Lattices' ಎಂಬ ಮಹಾಪ್ರಬಂಧಕ್ಕೆ ಈ ಪದವಿ ಲಭಿಸಿದೆ. ನಿಟ್ಟೆ ಇಂಜಿನಿಯರಿಂಗ್ ಕಾಲೇಜ್‌ನ ಗಣಿತಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ। ಶಶಿರೇಖಾ ರೈ ಅವರು ಮಾರ್ಗದರ್ಶನ ನೀಡಿರುತ್ತಾರೆ. ಪ್ರಶಾಂತ್ ರಾವ್ ಉಡುಪಿಯ ಕುಕ್ಕೆಹಳ್ಳಿ ದಿ। ಕೃಷ್ಣಮೂರ್ತಿ ರಾವ್ ಹಾಗೂ ಕಲ್ಯಾಣಿ ರಾವ್ ಅವರ ಪುತ್ರ.

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ಮೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

# ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಬಳಪ ಮೊರಾರ್ಜಿ ಸುಬ್ಬ ರಾವ್‌ರವರ ಪತ್ನಿ **ಶ್ರೀಮತಿ ಶ್ರೀದೇವಿಯಮ್ಮ** (86) ತಾ. 8–5–2021ನೇ ಶನಿವಾರ ಸುಬ್ರಹ್ಮಣ್ಯದಲ್ಲಿ ನಿಧನ ಹೊಂದಿದರು. ಇವರು ಓರ್ವ ಪುತ್ರ, ಇಬ್ಬರು ಪುತ್ರಿಯವರು ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ.

❖ ❖ ❖



ಬೈಲ್‌ಕೆರೆ ಅನಂತಪದ್ಮನಾಭ ರಾವ್‌ರವರ ಪತ್ನಿ **ಕೊಡವೂರು ಸರೋಜಿನಿ ಎ. ರಾವ್** (82) ರವರು ತಾ. 8–5–2021ರ ಶನಿವಾರ ಮಹಾರಾಷ್ಟ್ರದ ಥಾಣೆಯಲ್ಲಿ ನಿಧನ ಹೊಂದಿದರು. ಇವರು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

❖ ❖ ❖



ಉಡುಪಿಯ ಅಲೆವೂರು **ಶ್ರೀನಿವಾಸ್ ರಾವ್** (92)ರವರು ತಾ. 23–06–2021ನೇ ಬುಧವಾರ ನಿಧನ ಹೊಂದಿದರು. ಅವರು ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

❖ ❖ ❖



ಉಡುಪಿ ಕುಕ್ಕಿಕಟ್ಟೆಯ 'ಬ್ರಾಹ್ಮರಿ' ಹೋಟೇಲಿನ ಮ್ಹಾಲಿಕರಾದ **ಶ್ರೀ ಸುರೇಶ್ (ಪುಟ್ಟ)** (50) ತಾ. 22–06–2021ನೇ ಮಂಗಳವಾರ ನಿಧನ ಹೊಂದಿದರು. ಅವರು ಪತ್ನಿ, ಪುತ್ರ, ಪುತ್ರಿಯನ್ನು ಅಗಲಿದ್ದಾರೆ.

❖ ❖ ❖



ಉಡುಪಿ ಸ್ಥಾನಿಕ ಸಂಘದ ಸ್ಥಾಪಕ ಸದಸ್ಯರಾದ **ಶ್ರೀ ಉದ್ಯಾವರ ಗೋಪಾಲ ರಾವ್** (92) ತಾ. 15–6–2021ನೇ ಮಂಗಳವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ.

❖ ❖ ❖



ಕುಬೆವೂರು ರಾಮರಾವ್‌ರವರ ಪತ್ನಿ **ಶ್ರೀಮತಿ ರತ್ನಾ ರಾವ್**‌ರವರು ತಾ. 12–6–2021ನೇ ಶನಿವಾರ ನಿಧನ ಹೊಂದಿದರು. ಇವರು ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

❖ ❖ ❖



ನಂದಿಕೂರು ಭವಾನಿಶಂಕರ ರಾವ್‌ರವರ ಪತ್ನಿ **ಶ್ರೀಮತಿ ರಾಜೇಶ್ವರಿ** (86) ಇವರು ತಾ. 11–6–2021ನೇ ಶುಕ್ರವಾರ ನಿಧನ ಹೊಂದಿದರು. ಇವರು ನಾಲ್ವರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ.

❖ ❖ ❖



**ಬೈಕಾಡಿ ರಾಘವೇಂದ್ರ ರಾವ್** (46) ತಾ. 4–5–2021ನೇ ಮಂಗಳವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ತಂದೆ, ತಾಯಿ, ಪತ್ನಿ ಮತ್ತು ಓರ್ವ ಮಗನನ್ನು ಅಗಲಿದ್ದಾರೆ.

❖ ❖ ❖



ಬಪ್ಪನಾಡು ನಾರಾಯಣ ರಾವ್‌ರವರ ಪತ್ನಿ **ಶ್ರೀಮತಿ ವಿಮಲಾ ರಾವ್** (76) ತಾ. 5–5–2021ನೇ ಬುಧವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಓರ್ವ ಪುತ್ರ, ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.

❖ ❖ ❖



**ಕೊಕ್ರಾಡಿ ಚಂದ್ರಶೇಖರ ರಾವ್ (ಕೊಳ್ಳೆಗಾಲ)** ಇವರು ತಾ. 28–04–2021ನೇ ಬುಧವಾರ ಚಾಮರಾಜನಗರದಲ್ಲಿ ತಮ್ಮ 75ನೇ ವಯಸ್ಸಿನಲ್ಲಿ ಶಿವೈಕ್ಯರಾಗಿರುತ್ತಾರೆ. ಇವರು ಪತ್ನಿ, ಇಬ್ಬರು ಪುತ್ರರು ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ.



**ಕುಚ್ಚೂರು ಜನಕ ರಾವ್ ಹೆಬ್ಬಾರ್** (66) ತಾ. 26–4–2021ನೇ ಸೋಮವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❖ ❖ ❖



ಪೂವಂದೂರು ಶ್ರೀನಿವಾಸ್ ರಾವ್‌ರವರ ಪತ್ನಿ **ಶ್ರೀಮತಿ ಶಾಂತಾ** (71) ತಾ. 1–5–2021ನೇ ಶನಿವಾರ ಪೂವಂದೂರಿನಲ್ಲಿ ನಿಧನ ಹೊಂದಿದ್ದಾರೆ. ಇವರು ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❖ ❖ ❖



**ಎಲ್ಲೂರು ವಾಸುದೇವ್ ರಾವ್** (91) ತಾ. 1–5–2021ನೇ ಶನಿವಾರ ಮಂಗಳೂರಿನ ಸುರತ್ಕಲ್‌ನಲ್ಲಿ ನಿಧನ ಹೊಂದಿದರು. ಇವರು ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❖ ❖ ❖



ಮುದರಂಗಡಿ ಆನಂದ ರಾವ್‌ರವರ ಪತ್ನಿ **ಶ್ರೀಮತಿ ಲಕ್ಷ್ಮೀಬ್ಬಾ** (74) ತಾ. 27–4–2021ನೇ ಮಂಗಳವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಐವರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.

❖ ❖ ❖



ನಂದಿಕೂರು ಸಂಜೀವ್ ರಾವ್‌ರವರ ಪತ್ನಿ **ಶ್ರೀಮತಿ ಸೀತಾಲಕ್ಷ್ಮೀ (ಬೇಬಿ – 73)** ತಾ. 9–4–2021ನೇ ಶುಕ್ರವಾರ ನಂದಿಕೂರಿನಲ್ಲಿ ನಿಧನ ಹೊಂದಿದರು ಇವರು ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

❖ ❖ ❖




**ಬೆಟ್ಟಂಪಾಡಿ ಈಶ್ವರಪ್ಪಯ್ಯ** (92) ತಾ. 9–4–2021ನೇ ಶುಕ್ರವಾರ ನಾರಾವಿಯಲ್ಲಿ ನಿಧನ ಹೊಂದಿದರು. ಇವರು ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

❖ ❖ ❖




ಮೇಲಿನಮನೆ ಯಡ್ರುಗೋಡಿನ **ಶ್ರೀ ವೈ. ವಿ. ಸುಬ್ಬ ರಾವ್** (91) ತಾ. 24–6–2021ನೇ ಗುರುವಾರದಂದು ನಿಧನ ಹೊಂದಿದರು. ಇವರು ನಾಲ್ವರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

❖ ❖ ❖



**ಶ್ರೀಯುತ ಭರತೇಶ್ವರ ಶರ್ಮ, ಮುಂಬೈ** (72) ಇವರು ತಾ. 5–7–2021ನೇ ಸೋಮವಾರ ತೀವ್ರ ಹೃದಯಾಘಾತದಿಂದ ಸ್ವರ್ಗಸ್ಥರಾದರು. ಪತ್ನಿ, ಮಗ, ಮಗಳು ಮತ್ತು ಸೊಸೆ, ಅಳಿಯ, ಮೊಮ್ಮಕ್ಕಳು ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ.

❖ ❖ ❖



ಮುದ್ರಾಡಿ ಬೆಳ್ಳಗುಂಡಿಯ ನಿವೃತ್ತ ಅಧ್ಯಾಪಕರಾದ **ಎಂ. ರಂಗಯ್ಯ ಹೆಬ್ಬಾರ್‌ರವರು** ದಿನಾಂಕ 30–5–2021ರಂದು ದೈವಾಧೀನರಾದರು.

❖ ❖ ❖



**ಉಜ್ಜೋಡಿ ಪ್ರಭಾಕರ ರಾವ್** (86) ತಾ. 28–04–2021ರಂದು ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಪುತ್ರ, ಪುತ್ರಿ ಮತ್ತು ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.


ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
✆ : 9448043969
8861497325

**ಶಿವಗಿರಿ ಎಂಟರ್‌ಪ್ರೈಸಸ್**

**SHIVAGIRI ENTERPRISES**



ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

## ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರೆ 2019–2020ರ ಮಹಾಸಭೆ



ದಿನಾಂಕ 11–04–2021ರಂದು ಸಂಘದ 2019–2020ರ ಸಾಲಿನ ಮಹಾಸಭೆ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಸಭಾಂಗಣದಲ್ಲಿ ಸರಳ ರೀತಿಯಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ್ ರಾವ್ ವಹಿಸಿದ್ದರು. ವೇದಿಕೆಯಲ್ಲಿ ಗೌರವಾಧ್ಯಕ್ಷರಾದ ಶ್ರೀ ಪಿ. ಬಿ. ವಾಸುದೇವ ರಾವ್, ಉಪಾಧ್ಯಕ್ಷರಾದ ಶ್ರೀ ರಾಮ ರಾವ್, ಶ್ರೀ ಮಾಧವ ರಾವ್, ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ, ಶ್ರೀಮತಿ ಸುಮಿತ್ರಾ ಸುಬ್ಬ ರಾವ್, ಕಾರ್ಯದರ್ಶಿ ಶ್ರೀಮತಿ ರಮ್ಯ ಅರುಣ್ ರಾವ್, ಕೋಶಾಧಿಕಾರಿ ಶ್ರೀ ಅರವಿಂದ ರಾವ್, ಮಹಿಳಾ ವೇದಿಕೆಯ ಸಂಚಾಲಕಿ ಶ್ರೀಮತಿ ಸಾವಿತ್ರಿ ಅರವಿಂದ್ ರಾವ್, ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಜನಾರ್ದನ್ ರಾವ್ ಉಪಸ್ಥಿತರಿದ್ದರು. ಸಭೆಯಲ್ಲಿ ವಾರ್ಷಿಕ ವರದಿ, ಲೆಕ್ಕಪತ್ರ ಮಂಡನೆ ಹಾಗೂ ಮುಂದಿನ ಯೋಜನೆಗಳನ್ನು ಮಂಜೂರು ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ನಿರ್ದೇಶಕರಾಗಿ ಆಯ್ಕೆಯಾದ ಸಂಘದ ಜೊತೆ ಕೋಶಾಧಿಕಾರಿ ಶ್ರೀಮತಿ ವೇದಾವತಿ ದಿವಾಕರ್ ರಾವ್ ಇವರನ್ನು ಅಭಿನಂದಿಸಿ ಗೌರವಿಸಲಾಯಿತು ಹಾಗೂ ಸಂಘದಲ್ಲಿ ವಿಶೇಷವಾಗಿ ತಮ್ಮನ್ನು ತೊಡಗಿಸಿ ಕೊಂಡ ಸಂಘದ ಉಪಾಧ್ಯಕ್ಷರಾದ ಶ್ರೀ ಮಾಧವ ರಾವ್ ಹಾಗೂ ಸಂಘದ ನಿರ್ದೇಶಕರು – ಯುವ ವೇದಿಕೆಯ ಕ್ರೀಡಾ ಕಾರ್ಯದರ್ಶಿ ಶ್ರೀ ಕೃಷ್ಣರಾಜ್ ರಾವ್ ಇವರನ್ನು ಸ್ಮರಣಿಕೆ ನೀಡಿ ಗುರುತಿಸಿ ಗೌರವಿಸಲಾಯಿತು ಮತ್ತು ಪಿಯುಸಿಯಲ್ಲಿ ಶೇಕಡಾ 93.33 ಅಂಕಗಳಿಸಿದ ಕುಮಾರಿ ದೀಪಾಲಿ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು ಹಾಗೂ ಕ್ರೀಡಾಕ್ಷೇತ್ರದಲ್ಲಿ ಬೆಂಗಳೂರಿನಲ್ಲಿ ಹಿರಿಯರ ವಿಭಾಗದಲ್ಲಿ ನಡೆದ 800 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ ಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಶ್ರೀ ಕುಮಾರಸ್ವಾಮಿಯವರಿಗೆ ಹೂಗುಚ್ಛ ನೀಡಿ ಗೌರವಿಸಲಾಯಿತು. ಈ ಸಭೆಯನ್ನು ನಿರ್ದೇಶಕರಾದ ಶ್ರೀ ಜ್ಯೋತಿಂದ್ರನಾಥ್ ವೈ. ಸ್ವಾಗತಿಸಿ, ಶ್ರೀಮತಿ ಪವಿತ್ರ ಕೃಷ್ಣ ರಾವ್ ವಂದಿಸಿ, ಶ್ರೀ ಎಂ. ಕೆ. ದಿವಾಕರ ರಾವ್ ಸಂಘಟಿಸಿ, ಶ್ರೀ ಅರುಣ್ ರಾವ್ ಕಾರ್ಯಕ್ರಮ ನಿರೂಪಿಸಿದರು. ನಿರ್ದೇಶಕರು ಸಹಕರಿಸಿದರು. ಕೊನೆಗೆ ಸಭೆಗೆ ಆಗಮಿಸಿದ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಉಪಾಹಾರ ನೀಡಲಾಯಿತು.

## ಭೂಮಿಪೂಜೆಯ ಕಾರ್ಯಕ್ರಮ



ಪಡುಬಿದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಉತ್ತರ ದಿಕ್ಕಿನ ಕಾರ್ಕಳ ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ದ್ವಾರದ ಕಾಮಗಾರಿಯ ಭೂಮಿಪೂಜೆಯ ಕಾರ್ಯಕ್ರಮ ತಾ. 30–4–2021 ಶುಕ್ರವಾರ ಬೆಳಗ್ಗೆ ಶುಭಮುಹೂರ್ತದಲ್ಲಿ ಶ್ರೀ ಕ್ಷೇತ್ರದ ಪ್ರಧಾನ ಅರ್ಚಕರಾದ ಶ್ರೀ ಜಗದಾಬಿರಾಮ ಸ್ವಾಮಿಯವರು ನೆರವೇರಿಸಿದರು. ದ್ವಾರದ ನಿರ್ಮಾಣ ಮಾಡುವವರು ಹಾಗೂ ದಾನಿಗಳಾದ ಶ್ರೀ ಶೇಖರ್ ಶೆಟ್ಟಿಯವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಕ್ಷೇತ್ರದ ಪ್ರಧಾನ ಅರ್ಚಕರಾದ ಶ್ರೀ ಜಗದಾಬಿರಾಮಸ್ವಾಮಿ, ಶ್ರೀ ನಯನಾಭಿರಾಮಸ್ವಾಮಿ, ದೇವಸ್ಥಾನದ ಕಾರ್ಯದರ್ಶಿಯವರಾದ ಶ್ರೀ ಶ್ರೀನಿವಾಸ ಶರ್ಮ, ಶ್ರೀ ಯೋಗಾನಂದ ಶಾಸ್ತ್ರಿ, ದಾನಿಗಳಾದ ಶ್ರೀ ಶೇಖರ್ ಶೆಟ್ಟಿಯವರು ಉಪಸ್ಥಿತರಿದ್ದರು.

## ಶ್ರದ್ಧಾಂಜಲಿ

### ಕಣ್ಮರೆಯಾದ ಮಾಣಿಕ್ಯ ಕೆ. ಸುಬ್ಬ ರಾವ್ ಕೋರೆಗಾವ್




ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾದರಸದಂತೆ ತೊಡಗಿಸಿಕೊಂಡವರು. ದೇವರ ಪರಮ ಭಕ್ತರಾದ ಇವರು ಧರ್ಮಶ್ರದ್ಧೆಯ ಧುರಂಧರರಾಗಿ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ದೇವಾಲಯ, ದೈವಾಲಯಗಳ ಜೀರ್ಣೋದ್ಧಾರದಲ್ಲಿ ನೈಪುಣ್ಯತೆಯಲ್ಲಿ ನವೀನತೆಯನ್ನು ಸಾಧಿಸುವಲ್ಲಿ ದಾನ ಧರ್ಮಾದಿಗಳಿಂದ ಅಪ್ರತಿಮ ಸಾಧನೆಗೈದವರು ಕೆ. ಸುಬ್ಬ ರಾವ್ ಇವರು.

ಬಲಕೈಯಲ್ಲಿ ಕೊಟ್ಟ ದಾನ ಎಡಕೈಗೆ ಗೊತ್ತಾಗದಂತೆ ದಾನಧರ್ಮ ಮಾಡುವುದು ಇವರ ಪ್ರಾಮಾಣಿಕ ನಿಲುವು. ಇವರೊಬ್ಬ ಯಶಸ್ವಿ ಉದ್ಯಮಿಯಾಗಿದ್ದುಕೊಂಡು ಧಾರ್ಮಿಕ ಕ್ಷೇತ್ರದಲ್ಲಿ ಶ್ರೀ ಬಾಲಗಣಪತಿ ದೇವಸ್ಥಾನ, ಕುಂಜಾರುಗಿರಿ ದೇವಿ ದೇವಸ್ಥಾನ, ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನಗಳಿಗೆ ನೀಡಿದ ಕೊಡುಗೆ ಅನುಪಮವಾದದ್ದು. ಇವರು ಸ್ವ–ಹಿತಕ್ಕಿಂತ ಪರ–ಹಿತ ಮೇಲು ಎಂದು ಜೀವನದಲ್ಲಿ ಸಾರ್ಥಕತೆಯನ್ನು ಮೆರೆದವರು. ಇವರು ಪಡುಬಿದ್ರೆ ಸ್ಥಾನಿಕ ಬ್ರಾಹ್ಮಣ ಸಭಾ ಇದರ ಸದಸ್ಯರಾಗಿ, ವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿ ಈ ದೇವಸ್ಥಾನದ ಅಭಿವೃದ್ಧಿಗೆ ನೀಡಿದ ಕೊಡುಗೆ ಸದಾ ನೆನಪಿನ ಅಂಗಳದಲ್ಲಿ ಅಚ್ಚಳಿಯದೆ ಉಳಿಯುವಂತಾಗಿದೆ. ಪರೋಪಕಾರಿಯಾಗಿ, ಸರಳ ಸಜ್ಜನಿಕೆಯ ಸಾಕಾರಮೂರ್ತಿಯಾಗಿ, ಅಜಾತ ಶತ್ರುವಾಗಿ ದೇವರಪಾದ ಸೇರಿದರೂ ಕೂಡ ನಮ್ಮೆಲ್ಲರ ಹೃದಯಾಂತರಾಳದಲ್ಲಿ ಸದಾ ಚಿರಸ್ಥಾಯಿಯಾಗಿ ಇರುತ್ತೀರಿ. ಅಗಲಿದ ಈ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರೆ ಪ್ರಾರ್ಥಿಸುತ್ತದೆ.



ಪಡುಬಿದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಪುಷ್ಪರಥದ ಪ್ರಾರಂಭಿಕ ಹಂತವಾಗಿ ಕಾಷ್ಠಶಿಲ್ಪಿ ಇವರಿಗೆ ರಥದ ಮರವನ್ನು ನೀಡುವ ಕಾರ್ಯಕ್ರಮವು ಶ್ರೀ ದೇವರ ಸನ್ನಿಧಿಯಲ್ಲಿ ನಡೆಯಿತು.



ಪಡುಬಿದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಸುತ್ತುಪೌಳಿಯ ಒಳಗಿನ ಆವರಣದ ಗೋಡೆಯಲ್ಲಿ ಕಾರ್ಕಳದ ಓರ್ವರು ಶಂಕರಾಚಾರ್ಯರ ಭಕ್ತರು ಶ್ರೀ ಶಂಕರಾಚಾರ್ಯರ ಚಿತ್ರವನ್ನು ಪೈಂಟಿಂಗ್ ಮಾಡುವುದರ ಮೂಲಕ ತಮ್ಮ ಕೊಡುಗೆ ನೀಡಿದ್ದಾರೆ.


**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

Muralidhara Rao Adyapadi
Proprietor
Mob : 94480 27259
99803 16434
**SPANDANA**
Constructions

IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

**N. LAXMI PRASAD**

ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ –
**G. K. KOLPE**
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವರ್ಧಂತ್ಯುತ್ಸವ ಹಾಗೂ ಶ್ರೀ ರಾಮನವಮಿ



ಚಿತ್ರ : ಶ್ರೀ ರಘುವೀರ್ ಪೆರ್ಡೂರು

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. **18-04-2021**ನೇ ರವಿವಾರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ವರ್ಧಂತ್ಯುತ್ಸವ ಮತ್ತು ಶ್ರೀ ರಾಮನವಮಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಬೆಳಗ್ಗೆ ವಿವಿಧ ಪಾರಾಯಣಗಳ ಬಳಿಕ ಶಂಕರತತ್ವ ಅಭಿಯಾನಂನ ರಾಜ್ಯ ಸಂಚಾಲಕರಾದ ಶಿಕಾರಿಪುರ ಶ್ರೀ ಕೃಷ್ಣಮೂರ್ತಿಗಳ ನೇತೃತ್ವದಲ್ಲಿ ಲಲಿತ ಸಹಸ್ರನಾಮದಿಂದ ಲಕ್ಷ ಕುಂಕುಮಾರ್ಚನೆ ನಡೆಸಲಾಯಿತು. ಬಳಿಕ ಶ್ರೀ ಶಾರದಾಂಬ ಭಜನಾ ಮಂಡಳಿಯವರಿಂದ ಭಜನಾ ಸೇವೆ ನಡೆಯಿತು. ರಾಮನವಮಿ ಪ್ರಯುಕ್ತ ಶ್ರೀ ಸಭಾದ ರಾಮಮಂದಿರದಲ್ಲಿರುವ ಪರಿವಾರ ದೇವರುಗಳಿಗೆ ಅಭಿಷೇಕ ಮತ್ತು ಕಲ್ಪೋಕ್ತ ಪೂಜೆ ನಡೆಸಲಾಯಿತು. ಮಂಗಳಾರತಿ, ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಶಂಕರತತ್ವ ಅಭಿಯಾನಂನ ಶ್ರೀ ಶ್ರೀಧರ ಶಾಸ್ತ್ರಿ, ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ಪಿ. ಶ್ರೀಕಾಂತ್ ರಾವ್‌ರವರು ಕಾರ್ಯಕ್ರಮ ಸಂಘಟಿಸಿದರು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಪದಾಧಿಕಾರಿಗಳು, ಮಹಿಳಾ ವೇದಿಕೆ, ಯುವ ವೇದಿಕೆ ಪದಾಧಿಕಾರಿಗಳು, ಗುರುಭಕ್ತರು, ಶ್ರೀ ಸಭಾದ ಸದಸ್ಯರು ಭಾಗವಹಿಸಿ ಕೃತಾರ್ಥರಾದರು.


Follow us on :

**BUILDING DREAMS, ENHANCING LIVES**

Experience our Unique Projects at a Prime Localities of Mangalore

27 Years of Milestone | Land Trades® Builders & Developers



*Premium Apartments , World Class amenities , Landscaped Garden, CRISIL 7 Star Rated Project*

SOLITAIRE
Experience the difference

*Hathill , Chilimbi*

Club House | High Rise Tower
2,3,4 & 5 BHK Luxury Homes

*Affordable Homes at Derebail , Mangalore*

HABITAT ONE 54
An Urban Lifestyle

1 & 2 BHK RESIDENCES
FROM ₹30 LAKHS (All Inclusive)





NEWLY LAUNCHED PROJECT

NAKSHATRA

*Gandhinagar ,Mannagudda*

G+14 Storey | 50 Exclusive Apartments | 2&3 BHK Premium Homes

*Construction :* MFAR Constructions

*Developers CRISIL Rating :* DA2

8882 777 444
Email :sales@landtrades.in

Corporate Office: Milestone25", 5th Floor, Collectors Gate Junction, Balmatta, Mangalore, Karnataka 575002 | +91 824 2425424, 2423866, 2445840

CREDAI MANGALORE



Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

**Publisher :** Sri Harsha Kumar Kedige, President, Shree Subrahmanya Sabha (R.), Kodialbail, Mangalore - 3

**Editor :** Sri M. S. Raghunath Rao, Darbe, Puttur

**Printed at :** Rajesh Power Press, Darbe - 574 202, Puttur, D. K.